ಓ.ಎಸ್ 52/2019

ಪಿ ಡಬ್ಲ್ಯೂ-3

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿನಾಂಕಃ 24.05.2023

ಮುಖ್ಯ ವಿಚಾರಣೆಃ ಶ್ರೀ ಎಂ ವಿ ಹೆಚ್ ವಾದಿ ಪರ ವಕೀಲರಿಂದ

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತದೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.**

ಸಾಕ್ಷಿಗೆ ದಿನಾಂಕ 24.08.2016 ರಂದು ನೊಂದಾಯಿತವಾದ ಕ್ರಯದ ಕರಾರು ಪತ್ರವನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದ್ದು, ನಿ ಪಿ 1 ನ್ನು ನಾನು ಪತ್ರ ಬರಹಗಾರರಾಗಿ ಬರೆದುಕೊಟ್ಟಿರುತ್ತೇನೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 1(ಎಫ್) ಎಂದು ಗುರುತಿಸಲಾಗಿರುತ್ತದೆ. ನಿ ಪಿ 1 ನ್ನು ಪ್ರತಿವಾದಿಯರು ವಾದಿಗೆ ಬರೆದುಕೊಟ್ಟಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ ಪಿ1(ಎ) ಮತ್ತು 1(ಬಿ) ಎಂದು ಗುರುತಿಸಲಾಗಿದೆ. ನಿ ಪಿ 1 ಕ್ಕೆ ಸಾಕ್ಷಿದಾರರಾಗಿ ರವಿ ಮತ್ತು ಬಸವರಾಜು ಅವರು ಸಹಿ ಮಾಡಿರುತ್ತಾರೆ. ಸಾಕ್ಷಿಗಳ ಸಹಿಯನ್ನು ಸಾಕ್ಷಿ ನೋಡಿ ಗುರತಿಸಿದ್ದು ಅವುಗಳನ್ನು ಈಗಾಗಲೇ ನಿ ಪಿ 1(ಡಿ) ಮತ್ತು 1(ಈ) ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲು ಃ- ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಸ.ಇ.ಎ.ಒ.,

ಸಹಿ/-

3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.